# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(CIN) : U40109KA2004SGC035177
ನಿಗಮ ಕಛೇರಿ : ನಂ. 29, ವಿಜಯನಗರ,
2ನೇ ಹಂತ, ಹಿನಕಲ್
ಮೈಸೂರು-570 017
www.cescmysore.org

ರವರ ಕಛೇರಿ
ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಸೆಸ್ಕ್, ಬೇಲೂರು.
ದೂ.ಸಂ. 08177-222223
E.Mail : aeehsnbelur@rediffmail.com

ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಬೇ/2018-19/ಈ-16/ 4985-86 ದಿನಾಂಕ : 7/3/19

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ : 22.02.19 ರ ಶುಕ್ರವಾರದಂದು ಮಾನ್ಯ ಜಗದೀಶ್, ಕಾರ್ಯಪಾಲಕ ಇಂಜಿನಿಯರ್(ವಿ), ಸಕಲೇಶಪುರ ರವರ ಅಧ್ಯಕ್ಷತೆಯಲ್ಲಿ ಬೇಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ ;**

1. ಶ್ರೀ ಹರೀಶ್, ಲೆಕ್ಕಾಧಿಕಾರಿ, ಸಕಲೇಶಪುರ ವಿಭಾಗ.
2. ಶ್ರೀಮತಿ ಕವಿತಾ ಹೆಚ್. ಆರ್, ಸ.ಕಾ.ಇಂ(ವಿ), ಬೇಲೂರು ಉಪವಿಭಾಗ.
3. ಶ್ರೀ ಸಿ. ಎಸ್. ನಿಕೇಶ ಕುಮಾರ್, ಸಹಾಯಕ ಇಂಜಿನಿಯರ್(ತಾಂ), ಬೇಲೂರು ಉಪವಿಭಾಗ.
4. ಶ್ರೀ ಡಿ. ಸಂತೋಷ್ ಕುಮಾರ್, ಕಿರಿಯ ಇಂಜಿನಿಯರ್(ವಿ), ಹಳೇಬೀಡು ಶಾಖೆ.
5. ಶ್ರೀ ಯೋಗೇಶ್, ಕಿರಿಯ ಇಂಜಿನಿಯರ್(ವಿ), ಹಗರೆ ಶಾಖೆ.
6. ಶ್ರಿ ಜಿ. ಶಶಿಕಿರಣ್, ಕಿರಿಯ ಇಂಜಿನಿಯರ್(ವಿ), ತೊಳಲು ಶಾಖೆ.
7. ಶ್ರಿ ರಾಘವೇಂದ್ರ, ಪ್ರಭಾರಿ ಕಿರಿಯ ಇಂಜಿನಿಯರ್(ವಿ), ಅರೇಹಳ್ಳಿ ಶಾಖೆ.
8. ಶ್ರೀ ಎಂ. ಎನ್. ಗುರುಪ್ರಸಾದ್, ಹಿರಿಯ ಸಹಾಯಕರು, ಬೇಲೂರು ಉಪವಿಭಾಗ.
9. ಶ್ರೀ ಜಗದೀಶ್, ಹಿರಿಯ ಸಹಾಯಕರು, ಹಳೇಬೀಡು ಶಾಖೆ.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಮಧ್ಯಾಹ್ನ 3 : 00 ಘಂಟೆಗೆ ಪ್ರಾರಂಭ ಮಾಡಿದರು.**

---

**ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ ;**

1. ಕೋಡಿಮಠ ಗ್ರಾಮಸ್ಥರು ತಮ್ಮ ಗ್ರಾಮದಲ್ಲಿ ಬೆಳೆ ಅಭಿವೃದ್ಧಿ ಪಡಿಸಲು UNIP ಯೋಜನೆಯಡಿಯಲ್ಲಿ ತಮ್ಮ ಗ್ರಾಮಕ್ಕೆ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡಬೇಕೆಂದು ಕೋರಿದರು.

   ಇದಕ್ಕೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರು ತಮ್ಮ ಅನಧಿಕೃತ IP ಸ್ಥಾವರಕ್ಕೆ ಹಣವನ್ನು ಪಾವತಿಸಿ ಸಕ್ರಮ ಮಾಡಿಸುವಂತೆ ಸೂಚಿಸಿದರು ಹಾಗೂ ತೊಳಲು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿಯನ್ನು ತಯಾರಿಸುವಂತೆ ಸೂಚಿಸಲಾಯಿತು.

2. ಶ್ರೀ ಪ್ರೇಮ ಕುಮಾರ್, ಗ್ರಾಮ ಪಂಚಾಯತಿ ಅಧ್ಯಕ್ಷರು, ಗೆಂಡೇಹಳ್ಳಿ ರವರು ತಮಗೆ 63 ಕೆವಿಎ ಪರಿವರ್ತಕವು ಇದ್ದು, UNIP ಯೋಜನೆಯಡಿಯಲ್ಲಿ ಹೆಚ್ಚುವರಿಯಾಗಿ 2x25 ಕೆವಿಎ ಪರಿವರ್ತಕವನ್ನು ಅಳವಡಿಸಲು ತಯಾರಿಸಲಾದ ಅಂದಾಜು ಪಟ್ಟಿಯನ್ನು ಸಭೆಯ ಅಧ್ಯಕ್ಷರಿಗೆ ನೀಡಿದರು.

   ಇದಕ್ಕೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರು UNIP ಯೋಜನೆಯಡಿಯಲ್ಲಿ 2 ಸಂಖ್ಯೆಯ ಪರಿವರ್ತಕಕ್ಕೆ ತಯಾರಿಸಲಾದ ಅಂದಾಜು ಪಟ್ಟಿಯನ್ನು ಬದಲಾಯಿಸಿ, 1 ಸಂಖ್ಯೆಯ ಪರಿವರ್ತಕಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸುವಂತೆ ತೊಳಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು ಮತ್ತು ಅನಧಿಕೃತ IP ಸೆಟ್‌ಗಳನ್ನು ಡಿಸ್ಕನೆಕ್ಟ್ ಮಾಡುವಂತೆ ತಿಳಿಸಲಾಯಿತು ಹಾಗೂ UNIP ಯೋಜನೆಯಡಿಯಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸುವಾಗ ಜ್ಯೇಷ್ಠತಾ ಪಟ್ಟಿಯ ಪ್ರಕಾರ ತಯಾರಿಸುವಂತೆ ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು.

3. ಶ್ರೀ ಲಕ್ಷ್ಮಣ, ಹಿರಿಗದ್ದೆ ರವರು ತಮ್ಮ ಮೈಕ್ರೋವೇವ್ ಸ್ಟೇಷನ್‌ಗೆ ಈಗಾಗಲೇ 100 ಕೆವಿಎ ಪರಿವರ್ತಕವು ಇದ್ದು, Overload ಆಗಿರುತ್ತದೆ. ಒಂದು ವರ್ಷದ ಹಿಂದೆಯೇ ಅಂದಾಜು ಪಟ್ಟಿಯನ್ನು ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದ್ದರೂ ಸಹಾ ಈವರೆಗೂ ಪರಿವರ್ತಕವನ್ನು ನೀಡಿರುವುದಿಲ್ಲ. ಈಗ UNIP ಯೋಜನೆಯಡಿಯಲ್ಲಿ 1 ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿದರು.

ಇದಕ್ಕೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರು ತೊಳಲು ಶಾಖಾಧಿಕಾರಿಗಳಿಗೆ ಅನಧಿಕೃತ IP ಸೆಟ್‌ಗಳನ್ನು ಡಿಸ್ಕನೆಕ್ಟ್ ಮಾಡುವಂತೆ ತಿಳಿಸಲಾಯಿತು ಹಾಗೂ UNIP ಯೋಜನೆಯಡಿಯಲ್ಲಿ ಬಜೆಟ್ ಮುಗಿದಿದ್ದು, ಮಂಜೂರಾತಿ ನೀಡಿದ ಮೇಲೆ ಪರಿವರ್ತಕವನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು. ಎಂದು ತಿಳಿಸಿದರು.

4. ಶ್ರೀ ಪುರುಷೋತ್ತಮ, ಬೇಲೂರು ರವರು ಬೇಲೂರು ಪಟ್ಟಣ ವ್ಯಾಪ್ತಿಯಲ್ಲಿ ತುಂಬಾ ದಿನಗಳಿಂದ ವಿದ್ಯುತ್ ಸಮಸ್ಯೆಯಾಗುತ್ತಿದ್ದು, ಸಂಜೆ 5:30 ಸಮಯದ ನಂತರ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬಾರದೆಂದು ಕೋರಿದರು.

ಇದಕ್ಕೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರು, ಬೇಲೂರು ಪಟ್ಟಣ ವ್ಯಾಪ್ತಿಯಲ್ಲಿ IPDS ಕಾಮಗಾರಿಯು ನಡೆಯುತ್ತಿದ್ದು, ವಿದ್ಯುತ್ ಅಡಚಣೆಯ ಸಮಸ್ಯೆಯಾಗುತ್ತಿರುತ್ತದೆ ಹಾಗೂ ಇದಕ್ಕೆ ಸಂಬಂಧಿಸಿದಂತೆ ಪತ್ರಿಕಾ ಪ್ರಕಟಣೆ ನೀಡಲಾಗಿದ್ದು, ಸಾರ್ವಜನಿಕರು ಸಹಕರಿಸಬೇಕೆಂದು ತಿಳಿಸಿದರು. ಸಂಜೆಯ ವೇಳೆಗೆ ವಿದ್ಯುತ್ ಸಂಪರ್ಕವನ್ನು ನೀಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

5. ಶ್ರೀ ಮಲ್ಲಿಕಾರ್ಜುನ, ರೈತ ಮುಖಂಡರು, ಮುತ್ತುಗನ್ನೆ ರವರು ತಮ್ಮ ಮನೆಗೆ IP ಫೀಡರ್ ನಿಂದ ಇರುವ ವಿದ್ಯುತ್ ಸಂಪರ್ಕವನ್ನು NJY ಫೀಡರ್ ನಿಂದ ನೀಡಬೇಕೆಂದು ಹಾಗೂ DDUGJY ಯೋಜನೆಯಡಿಯಲ್ಲಿ ಕಂಬಗಳನ್ನು ಒದಗಿಸಿ ವಿದ್ಯುತ್ ಸಂಪರ್ಕವನ್ನು ನೀಡಬೇಕೆಂದು ಕೋರಿದರು.

ಇದಕ್ಕೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರು ಊರಿನ ಹೊರಭಾಗದಲ್ಲಿರುವ ಮನೆಗಳಿಗೆ DDUGJY ಯಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ನೀಡಲಾಗುವುದಿಲ್ಲ ಆದರೆ ಸ್ವಯಂ ಕಾಮಗಾರಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆಯಬಹುದಾಗಿರುತ್ತದೆ ಎಂದು ತಿಳಿಸಿದರು.

6. ಶ್ರೀ ಚಂದ್ರಶೇಖರ, ಮುತ್ತುಗನ್ನೆ ರವರು ತಮ್ಮ ಮನೆಗೆ DDUGJY ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ನೀಡುವಂತೆ ಕೋರಿದರು.

ಇದಕ್ಕೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ), ಬೇಲೂರು ರವರು ಈಗಾಗಲೇ ಸ್ಥಳ ಪರಿಶೀಲಿಸಲಾಗಿರುತ್ತದೆ ಹಾಗೂ ತಮಗೆ DDUGJY ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ನೀಡಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ವಂದಿಸುವ ಮೂಲಕ ಸಭೆಯನ್ನು ಸಂಜೆ 5 : 30 ಕ್ಕೆ ಮುಕ್ತಾಯಗೊಳಿಸಲಾಯಿತು.**

For [signature]

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ–ವಿಭಾಗ, ಸೆಸ್ಕ್, ಬೇಲೂರು.

*ಯಥಾ ಪ್ರತಿಗಳನ್ನು* :

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
3. ಕಛೇರಿ ಪ್ರತಿ.